(೭) ನಗರಸಭೆಯ ಪೌರಕಾರ್ಮಿಕರು ಮುಷ್ಕರವನ್ನು ಹೂಡಿರುವ ಬಗ್ಗೆ

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಎರಡು ನಗರಸಭೆಗಳಲ್ಲಿ ಪೌರ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಮುಷ್ಕರವನ್ನು ಹೂಡಿದ್ದಾರೆ. ಅದರ ಬಗ್ಗೆ ನೋಟೀಸ್‌ನ್ನು ಕಳುಹಿಸಿ ಕೊಟ್ಟಿದ್ದೇನೆ. ಸರ್ಕಾರದಿಂದ ಉತ್ತರ ಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ನಾನು ಹೇಳುವುದೇನೆಂದರೆ, ಇಂದು ಅದು ಏತಕ್ಕೆ ಬರಲಿಲ್ಲ ಎನ್ನುವುದನ್ನು ನಾನು ಕೇಳುತ್ತೇನೆ.

(ಗೊಂದಲ)

ಶ್ರೀ ಪಂಪಾಪತಿ.—ನಗರ ಪೌರ ಕಾರ್ಮಿಕರು ಮುಷ್ಕರ ಹೂಡಿರುವುದರಿಂದ ಬಹಳ ತೊಂದರೆಯಾಗುತ್ತದೆ. ವಾಸನೆ ಬರುತ್ತದೆ, ನಗರ ಕೆಟ್ಟು ಕೋಲಾಹಲವಾಗತಕ್ಕಂಥ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಇರುತ್ತಾರೆ. ಅದನ್ನು ಇಂದೇ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

೨-೩೦ ಪಿ.ಎಂ.

(ಗೊಂದಲ)

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ೩೬ಳಿರ ಪ್ರಾಮುಖ್ಯತೆಯನ್ನು ಈ ಸದನದಲ್ಲಿ ಅನೇಕ ಬಾರಿ ಚರ್ಚೆ ಮಾಡಿದ್ದೇವೆ.

ಅಧ್ಯಕ್ಷರು.—ಭೂಪತಿಯವರೇ, ನೀವು ಕೂಡಿರಿ, ೩೬ಳಿರ ನೋಟೀಸ್ ಕೊಟ್ಟರೆ ಅದನ್ನು ಸ್ಕ್ರೂಟಿನಿ ಮಾಡಿ ಯಾವುದನ್ನು ಇಡಬೇಕೋ ಅದನ್ನು ಇಡಲಾಗುತ್ತದೆ. ಈಗ ಶ್ರೀ ಯಡಿಯೂರಪ್ಪನವರು ಕೊಟ್ಟಿದ್ದ ಸೂಚನೆಗೆ ಈಗಾಗಲೇ ಉತ್ತರ ಕೊಟ್ಟಿರುವುದರಿಂದ ಅದನ್ನು ಡಿಸ್‌ಅಲೋ ಮಾಡಬೇಕಾಯಿತು. ಬಿಜಿನೆಸ್ ಅಡ್ವೈಸರಿ ಕಮಿಟಿಯವರು ಸೂಚನೆ ಮಾಡಿದ್ದು ದಿವಸಕ್ಕೆ ಐದು ತೆಗೆದುಕೊಳ್ಳಬೇಕೆಂದು. ನಿಮಗೆಲ್ಲಾ ಅನುಕೂಲ ಮಾಡಿಕೊಳ್ಳುವ ಸಲುವಾಗಿ ಹತ್ತು-ಹದಿನೈದು ಇಟ್ಟುಕೊಳ್ಳುತ್ತಿದ್ದೇವೆ. ಅದರೂ ತವಂಗೆ ಸಮಾಧಾನ ಇಲ್ಲ.

ಶ್ರೀ ಪಂಪಾಪತಿ.—ಅದರೆ ಅಧ್ಯಕ್ಷರೇ, ಇದು ಬಹಳ ಪ್ರಾಮುಖ್ಯವಾದ ವಿಷಯ ಆಗಿದೆ.

ಅಧ್ಯಕ್ಷರು.—ಮಂತ್ರಿಗಳು ಹೇಳಿದರೆ ಸಮಾಧಾನದಿಂದ ಕೇಳುತ್ತೀರಿ. ನಾನು ರೂಲ್ಸ್ ಪ್ರಕಾರ ಹೇಳಿದರೆ, ಗಲಾಟೆ ಮಾಡುತ್ತೀರಿ.

ಶ್ರೀ ಯು. ಭೂಪತಿ.—ಅಧ್ಯಕ್ಷರೇ, ಇವತ್ತು ನಗರಸಭೆಗಳ ನೌಕರರ ಮುಷ್ಕರದಿಂದ ಏನು ಪರಿಣಾಮ ಬೀರಿದೆಯೆಂಬುದನ್ನು ತಾವು ಗಮನಿಸಿದ್ದೀರಾ ?

ಅಧ್ಯಕ್ಷರು.—ನೀವು ಈ ತರಹ ಮಾತನಾಡುತ್ತಾ ಹೋದರೆ, ಇದನ್ನು ವಿಧಾನಸಭೆ ಎನ್ನಬೇಕೋ ಹೇಗೆ ? ನೀವು ಪ್ರಸ್ತಾಪ ಮಾಡಿರುವ ವಿಷಯದ ಬಗ್ಗೆ ಹಿಂದೆ ಮಂತ್ರಿಗಳು ಉತ್ತರ ಕೊಟ್ಟಿದ್ದಾರಲ್ಲ?

(ಗೊಂದಲ)

ಶ್ರೀ ಪಂಪಾಪತಿ.—ನೀವು ಇಷ್ಟು ನಿಷ್ಠೂರವಾಗಿ ವರ್ತಿಸಿದರೆ ಹೇಗೆ ಅಧ್ಯಕ್ಷರೆ ?

ಅಧ್ಯಕ್ಷರು.—ಸೋಗಲಿ, ಇದು ಕೊನೆಯ ಅವಕಾಶ ಎಂದು ಕೊಡುತ್ತಿದ್ದೇನೆ. ಅಜೆಂಡಾದಲ್ಲಿ ಇರುವುದನ್ನು ಬಿಟ್ಟು ಡೀವಿಯೆಟ್ ಮಾಡುವುದಕ್ಕೆ ನನಗೆ ಅಧಿಕಾರ ಇಲ್ಲ. ಪಂಪಾಪತಿಯವರೇ ಕೇಳಿರಿ.

ಶ್ರೀ ಪಂಪಾಪತಿ.—ಕರ್ನಾಟಕದ ಎಲ್ಲಾ ನಗರಸಭೆಗಳ ನೌಕರರು ಮತ್ತು ಇತರ ಎಲ್ಲಾ ವರ್ಗದ ನೌಕರರು (ಪೌರಕಾರ್ಮಿಕರು) ಕರ್ನಾಟಕ ರಾಜ್ಯ ಸಿವಿಲ್ ಸರ್ವಿಸ್ ರೂಲ್ಸ್, ಇವರುಗಳಿಗೂ ಅನ್ವಯವಾಗಬೇಕೆಂದು ಸರ್ಕಾರದ ಗಮನ ಸೆಳೆಯಲು ೬-೩-೧೯೮೬ ರಿಂದ ಸಂಪೂರ್ಣ ಮುಷ್ಕರ ಆಚರಿಸುತ್ತಿದ್ದಾರೆ. ಈ ಮುಷ್ಕರವನ್ನು ಎಲ್ಲಾ ನಗರಸಭೆಗಳ ನೌಕರರೂ ಆಚರಿಸುತ್ತಿರುವುದಾಗಿ

ತಿಳಿದುಬಂದಿದೆ. ನೌಕರರ ಮುಷ್ಕರದಿಂದ ನಗರಗಳಲ್ಲಿ ಕಸ ಹಾಗೂ ಚರಂಡಿಗಳು ಸ್ವಚ್ಛವಾಗದೇ ಉಳಿಯುವುದರಿಂದ ನಗರ ನೈರ್ಮಲ್ಯ ಕಲುಷಿತವಾಗುತ್ತದೆ. ಇದರಿಂದ ರೋಗರುಜಿನಗಳು ಹರಡುವ ಸಾಧ್ಯತೆ ಇದೆ. ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ನ್ಯಾಯಸಮ್ಮತವಾದ ನೌಕರರ ಬೇಡಿಕೆಗಳನ್ನು ಸರ್ಕಾರವು ಈ ಕೂಡಲೇ ಈಡೇರಿಸಬೇಕೆಂದು ಈ ಮೂಲಕ ನಾನು ಸರ್ಕಾರವನ್ನು ಆಗ್ರಹಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ನಗರಾಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಈಗ ಕೆಲವು ನಗರಸಭೆಗಳಲ್ಲಿ ಕೆಲಸ ಮಾಡತಕ್ಕಂಥ ಪೌರ ಕಾರ್ಮಿಕರು ಮುಷ್ಕರ ಹೂಡಿದ್ದಾರೆ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಅವರ ಮುಖ್ಯವಾದ ಬೇಡಿಕೆ ಎಂದರೆ, ಅವರ ಬೇಡಿಕೆಗಳನ್ನು ಸರ್ಕಾರದವರು ಇನ್ನೂ ಪರಿಶೀಲನೆ ಮಾಡಿ ಇತ್ಯರ್ಥ ಮಾಡಿಲ್ಲ, ಒಪ್ಪಿಕೊಂಡಿಲ್ಲವೆಂದು ಹೇಳಿದ್ದಾರೆ ಸನ್ಮಾನ್ಯ ಅಧ್ಯಕ್ಷರೇ, ನಾನು ನಗರಾಭಿವೃದ್ಧಿ ಸಚಿವನಾಗಿದ್ದು ಮಾರ್ಚ್ ತಿಂಗಳಿನಲ್ಲಿ. ಅಲ್ಲಿಂದ ಡಿಸೆಂಬರ್ ೮೫ರ ಹೊತ್ತಿಗೆ ಮೂರು ಸಲ ಈ ಸಂಘದ ಪದಾಧಿಕಾರಿಗಳನ್ನು, ಅಧ್ಯಕ್ಷರನ್ನು ಕರೆದು ಮಾತನಾಡಿದ್ದೇನೆ. ೧೫–೨೦ ವರ್ಷಗಳಿಂದ ಮೂಲೆಗುಂಪಾಗಿದ್ದ ಅವರ ಬೇಡಿಕೆಗಳನ್ನು ಸುಮಾರು ನೂರಕ್ಕೆ ತೊಂಬತ್ತರಷ್ಟು ಒಪ್ಪಿಕೊಂಡುಬಿಟ್ಟಿದ್ದೇವೆ. ಈಗ ಒಂದೇ ಒಂದು ಬೇಡಿಕೆ ಉಳಿದಿರುವುದೆಂದರೆ, ಮುನಿಸಿಪಾಲಿಟಿ ನೌಕರರಿಗೆ ಕೆ.ಸಿ.ಎಸ್.ಆರ್‌ನ್ನು ಅಪ್ಲೈ ಮಾಡಬೇಕೆಂಬುದು. ಈ ಬೇಡಿಕೆಯನ್ನು ಸರ್ಕಾರ ಹಲವಾರು ಇಲಾಖೆಗಳಲ್ಲಿ ಪರಿಶೀಲನೆ ಮಾಡಬೇಕಾಗುತ್ತದೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಪರಿಶೀಲನೆಯಾಗಬೇಕು, ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಪರಿಶೀಲನೆ ಮಾಡಬೇಕು ಮತ್ತು ಕಾನೂನು ಇಲಾಖೆಯಲ್ಲೂ ಪರಿಶೀಲನೆ ಆಗಬೇಕು. ಇವೆಲ್ಲವನ್ನೂ ಪರಿಶೀಲನೆ ಮಾಡಿ ಇದರ ಬಗ್ಗೆ ನಾನು ನಿರ್ಣಯ ತೆಗೆದುಕೊಳ್ಳುತ್ತೇನೆ ಎಂದು ಈಗಾಗಲೇ ನಾನು ಆಶ್ವಾಸನೆಯನ್ನು ಕೊಟ್ಟಿದ್ದೇನೆ. ಎರಡನೆಯದಾಗಿ, ಹಲವರು ಸಲ ನಾನು ಪ್ರವಾಸಕ್ಕೆ ಹೋದಾಗ, ಜಿಲ್ಲಾಮಟ್ಟದಲ್ಲಿ ಮುನಿಸಿಪಾಲಿಟಿ ಅಧ್ಯಕ್ಷರ ಮತ್ತು ಚೀಫ್ ಆಫೀಸರಂಗಳ ಸಭೆಯಲ್ಲಿ ಹೋದಾಗಲ್ಲಾ ಎಲ್ಲಾ ಕಡೆಗಳಲ್ಲೂ ಬೇಡಿಕೆಯನ್ನು ಒಳಗೊಂಡ ಮನವಿಗಳನ್ನು ಕೊಟ್ಟಿದ್ದಾರೆ. ಆಗಲೂ ಕೂಡ ನಾನು ಇದೇ ಉತ್ತರವನ್ನು ಕೊಟ್ಟಿದ್ದೇನೆ. ಇದರ ಜೊತೆಗೆ ಮಂಡಲ ಪಂಚಾಯತ್ ಆದಮೇಲೆ ಅಲ್ಲಿ ಇದ್ದಂತಹ ೭೧ ಮುನಿಸಿಪಾಟಿಯ ಅಧಿಕಾರಿಗಳನ್ನು ತೆಗೆದುಕೊಳ್ಳಬೇಕೆಂದು ಆದೇಶ ಈಗಾಗಲೇ ಹೋಗಿದೆ. ಬೇರೆ ಬೇರೆ ಇಲಾಖೆಗಳಿಂದ ಮುನಿಸಿಪಾಲಿಟಿಗೆ ಬಂದಿರತಕ್ಕವರನ್ನು ಆಯಾಯ ಇಲಾಖೆಗಳಿಗೆ ಕಳಿಸತಕ್ಕಂಥ ಕೆಲಸ ಪ್ರಾರಂಭವಾಗಿದೆ. ಆಮೇಲೆ ಅನೇಕ ವರ್ಷಗಳಿಂದ ಪ್ರಮೋಷನ್ ಇಲ್ಲದಂಥ ನೌಕರರಿಗೆ ಪ್ರಮೋಷನ್ ಕೊಡತಕ್ಕಂಥ ಕಾರ್ಯವನ್ನು ಈಗಾಗಲೇ ಮಾಡಿದ್ದೇವೆ. ಹೀಗೆ ಮೂಲಭೂತವಾಗಿ ಇದ್ದಂಥ ಅನೇಕ ಬೇಡಿಕೆಗಳನ್ನು ಒಂಬತು–ಹತ್ತು ತಿಂಗಳ ಅವಧಿಯಲ್ಲಿ ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಇಷ್ಟು ಪ್ರಮಾಣಕವಾದ ಪ್ರಯತ್ನಗಳು ಹಿಂದೆಯೇ ಆಗಿದ್ದರೆ, ಈ ಪರಿಸ್ಥಿತಿ ಈಗ ಬರುತ್ತಿರಲಿಲ್ಲ. ಈಗ ಉಳಿದಿರುವ ಒಂದು ಬೇಡಿಕೆಯ ಬಗ್ಗೆ ಹಲವಾರು ತೊಡಕುಗಳು ಇರುವುದರಿಂದ, ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದೇನೆ. ಆದ್ದರಿಂದ ಯಾರ್ಯಾರು ಮುಷ್ಕರ ಹೂಡುತ್ತಿದ್ದಾರೆ, ದಯವಿಟ್ಟು ಅವರು ಮುಷ್ಕರವನ್ನು ಮುಂದಂವರಿಸುವುದು ಬೇಡ. ಅವರ ಎಲ್ಲಾ ಬೇಡಿಕೆಗಳನ್ನು ಸಹಾನುಭೂತಿಯಿಂದ ನೋಡಿ ತೀರ್ಮಾನ ಮಾಡಿದ್ದೇವೆ. ಉಳಿದಿರತಕ್ಕಂಥ ಒಂದೇ ಒಂದು ಬೇಡಿಕೆ ಕೂಡ ವಿಚಾರಣೆ ಸ್ಥಿತಿಯಲ್ಲಿದೆ. ಇದರ ಬಗ್ಗೆ ಕೂಡ ತೀರ್ಮಾನ ತೆಗೆದುಕೊಳ್ಳುತ್ತೇನೆ. ಈ ಬಗ್ಗೆ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ನನ್ನನ್ನು ನೋಡುವುದಿದ್ದರೆ. ಅವರು ಬಂದು ನೋಡುವುದಕ್ಕೆ ನನ್ನ ಅಡ್ಡಿ ಇರುವುದಿಲ್ಲ. ಅವರನ್ನು ಭೇಟಿ ಮಾಡಲು ನಾನು ಸಿದ್ಧನಾಗಿದ್ದೇನೆ. ಯಾರ್ಯಾರು ಮುಷ್ಕರ ಹೂಡುತ್ತಿದ್ದಾರೆ, ಅವರು ತಮ್ಮ ಮುಷ್ಕರವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಮತ್ತು ನಗರವಾಸಿಗಳಿಗೆ ತೊಂದರೆಯಾಗದಂತೆ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯವಿಟ್ಟು ಅವರು ತಮ್ಮ ಸಂಪನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು.